# ಯಾರ ಸ್ನೇಹ ಮಾಡ್ಬೇಕು?



ಚಿತ್ರ: ವಿಜಯಕುಮಾರಿ ಆರ್.

ಒಮ್ಮೆ ಕಾಡಿನಲ್ಲಿ ಕತ್ತೆಯು ಒಂದು ಹುಲಿಯ ಹತ್ತಿರ 'ಹುಲ್ಲಿನ ಬಣ್ಣ ನೀಲಿ' ಎಂದು ಹೇಳಿದಾಗ, ಹುಲಿಯು ಇಲ್ಲಾ, ಹುಲ್ಲಿನ ಬಣ್ಣ ಹಸಿರು ಎಂದಿತು. ಆಗ ಕತ್ತೆಯು ಮತ್ತೆ ಅದರ ಬಣ್ಣ ನೀಲಿ ಎಂದು ವಾದಿಸಿತು. ಕ್ರಮೇಣ ಇಬ್ಬರಿಗೂ ವಾಗ್ವಾದದಿಂದ ಜಗಳ ಶುರುವಾಗಿ ಯಾರು ಸಮಾಧಾನ ಹೇಳಿದರು ಕೇಳದೆ, ಕೊನೆಗೆ ಕಾಡಿನ ರಾಜನಾದ ಸಿಂಹದ ಬಳಿಗೆ ಹೋದವು.

ಕತ್ತೆಯು ಹುಲಿಗೆ ಮಾತನಾಡಲು ಅವಕಾಶವನ್ನೇ ಕೊಡದೆ ಸಿಂಹದ ಹತ್ತಿರ ಹುಲ್ಲಿನ ಬಣ್ಣ ನೀಲಿ ತಾನೇ ಎಂದು ಕೇಳಿದಾಗ, ಅದು ಹೌದು. ಹುಲ್ಲಿನ ಬಣ್ಣ ನೀಲಿ, ಆ ಹುಲಿಗೆ ಒಂದು ತಿಂಗಳ ಕಾರಾಗೃಹ ಶಿಕ್ಷೆಯಾಗಲಿ ಎಂದು ಆಜ್ಞಾಪಿಸಿತು.

ಹುಲಿಯು ದಿಗ್‌ಭ್ರಾಂತನಾಗಿ ಸಿಂಹದ ಬಳಿ ಬಂದು ಮಹಾರಾಜ, ಹುಲ್ಲಿನ ಬಣ್ಣ ಹಸಿರು ತಾನೇ ಎಂದು ಕೇಳಿದಾಗ, ಸಿಂಹವು ಹೌದು, ಹುಲ್ಲು ಹಸಿರಾಗಿಯೇ ಇರುವುದು ಎಂದಿತು. ಹಾಗಾದರೆ, ನನಗೆ ಯಾಕೆ ಶಿಕ್ಷೆ ನೀಡಿದಿರಿ ಎಂದು ಕೇಳಿದಾಗ, ನಿನಗೆ ಶಿಕ್ಷೆ ನೀಡಿದ್ದು ಹುಲ್ಲಿನ ಬಣ್ಣದ ವಿಷಯವಾಗಿಲ್ಲ, ವೀರ್ಯಕ್ಕೆ, ಶೌರ್ಯಕ್ಕೆ ಹೆಸರಾದ ನೀನು, ಒಂದು ಯಕಶ್ಚಿತ್ ಮೂರ್ಖ ಬುದ್ಧಿಹೀನನಾದ ಕತ್ತೆಯ ಜೊತೆಗೆ ಕ್ಷುಲ್ಲಕ ವಿಚಾರಕ್ಕೆ ಜಗಳ ಮಾಡಿಕೊಂಡು ಅದರ ಪರಿಹಾರಕ್ಕೆಂದು ನನ್ನ ಬಳಿಗೆ ಬಂದೆಯಲ್ಲಾ ಅದಕ್ಕೆ ನಿನಗೆ ಶಿಕ್ಷೆ ಕೊಟ್ಟದ್ದು. ಇನ್ನು ಮೇಲೆ ನಿನ್ನ ಸರಿಸಮರೊಂದಿಗೆ ಸಹವಾಸ ಮಾಡಿ ಗತ್ತಿನಿಂದ ಇರು ಎಂದು ಉಪದೇಶಿಸಿ, ಈ ಸರ್ತಿ ನಿನ್ನ ಶಿಕ್ಷೆ ಮನ್ನಾ ಮಾಡಿದ್ದೇನೆ ಎಂದು ಹೇಳಿ ಕಳಿಸಿಕೊಟ್ಟಿತು.

ಹಾಗೆಯೇ ಮಕ್ಕಳೆ, ನಾವು ಯಾವಾಗಲೂ ನಮ್ಮ ಸಮಾನರೊಂದಿಗೆ ಅಥವಾ ನಮಗಿಂತ ಹೆಚ್ಚು ವಿದ್ಯೆ ಬುದ್ಧಿಯಿರುವವರ ಜೊತೆಗೆ ಸಹವಾಸ ಮಾಡಿದರೆ ನಮ್ಮ ಮುಂದಿನ ಜೀವನ ಹಸನಾಗಿರುವುದು.

■ **ಸಿ.ಆರ್. ಪುಷ್ಪ**

# ನನ್ನ ತಮ್ಮ

ನನ್ನ ತಮ್ಮ ಬಹಳ ತುಂಟ
ಕೋತಿ ಅನ್ನುವನು ನನ್ನನ್ನೇ
ಕಟ್ಟಿಕೊಂಡು ಚೆಂದದ ಬಾಲವ
ಕುಣಿವನು ಕೋತಿಯ ಹಾಗೇನೆ

ತುಂಬಾ ಮುದ್ದು ನನ್ನ ತಮ್ಮ
ತಿಮ್ಮರಾಯ ಅನ್ನುತ್ತೇನೆ
ಮುಖವನು ಕಿವುಚಿ ಅಳುತಾನವನು
ಸುಂದರ ಮೋರೆಯ ಸುಬ್ಬಣ್ಣ

ಆನೆಯಂತೆ ನಾನೇ ಅವನಿಗೆ
ಬೆನ್ನನು ಹತ್ತುವ ಮಹಾರಾಯ
ಜುಟ್ಟನು ಹಿಡಿದು ನಡಿ ನಡಿ ಎನ್ನುತ
ಸವಾರಿ ಮಾಡುವ ಮಹರಾಜ

ಬೀದಿಯ ತುಂಬಾ ಇವನದೆ ಸುದ್ದಿ
ಎತ್ತಿಕೊಳುವರು ಇವನನ್ನೆ
ಗಿಂಡಿ ಹಿಂಡಿ ಮಾಡುವರೆಲ್ಲ
ಬಿಳಿ ಬಿಳಿ ಗಲ್ಲವ ಕೆಂಪನೆ ಎಲ್ಲ

ಪಕ್ಕದ ಮನೆಯ ಬೆಕ್ಕು ಮುದ್ದು
ರೊಟ್ಟಿಗೆ ಕಾಯುವ ನಾಯಿ ಮುದ್ದು
ಅಂಬಾ ಎನುವಾ ಆಕಳು ಮುದ್ದು
ಪ್ರಾಣಿ ಪಕ್ಷಿ ಗಿಡಮರ ಮುದ್ದು

ಎಲ್ಲರ ಕರೆವನು ಊಟದ ಸಮಯಕೆ
ಬರದಿರೆ ತಾನೆ ಹೋಗುವ ಸನಿಹಕೆ
ನಮ್ಮ ಮನೆಗೆ ಮಗರಾಯ
ಆಟಕೆ ಜೊತೆ ಇರುವನು ಇವಗೆ ಇಲಿರಾಯ

■ **ಕೃಷ್ಣ ದೇವಾಂಗಮಠ**


ಚಿತ್ರ: ಶಶಿಕಿರಣ್ ದೇಸಾಯಿ